
ಆಧುನಿಕ ಜಗತ್ತಿನ ಜಾನಪದವಾಗಿರುವ ಸಿನಿಮಾ ಹಲಬಗೆಯಲ್ಲಿ ನೋಡುಗರನ್ನು ಕಾಡುತ್ತ, ಪರವಶಗೊಳಿಸುತ್ತ ಬಂದಿದೆ. ವಿಶಿಷ್ಟ ಸಿನಿಮಾಗಳ ಮಾಂತ್ರಿಕತೆಯನ್ನು ಚಿತ್ರರಸಿಕರಿಗೆ ಇಲ್ಲಿ ಪರಿಚಯಿಸಲಾಗುತ್ತದೆ. ತಮ್ಮ ಚಿತ್ತದ ಬೆಳ್ಳಿತೆರೆಯಲ್ಲಿ ದಾಖಲಾದ, ಮನಸ್ಸನ್ನು ಸೂರೆಗೊಂಡ ಅನನ್ಯ ಸಿನಿಮಾ ಒಂದರ ಚಿತ್ರಕ ಬರವಣಿಗೆ ಇಲ್ಲಿದೆ





ಸಿದ್ಧ ಮಾದರಿಯನ್ನು ಮುರಿದು ಕಟ್ಟುವ ಸಿನಿಮಾವನ್ನು 'ಕ್ಲಾಸಿಕಲ್ ಕಲ್ಟ್' ಎನ್ನುತ್ತಾರೆ. ಜನಪ್ರಿಯ ಧಾಟಿಯನ್ನು ಒಪ್ಪಿಕೊಂಡೂ ಅದಕ್ಕೆ ಹೊರತಾದ ದೃಶ್ಯ ಸಂಯೋಜನೆ ಮಾಡುವ ಪ್ರಯೋಗಮುಖಿಗಳು ನಮ್ಮ ನಡುವೆ ಇದ್ದಾರೆ. ಹೂಡಿದ ದೊಡ್ಡ ಮೊತ್ತದ ಬಂಡವಾಳ ವಾಪಸ್ಸಾಗಲಿ ಎನ್ನುವ ಸಹಜ ನಿರೀಕ್ಷೆ ಇಂಥ ಸಿನಿಮಾಗಳನ್ನು ಕಟ್ಟುವ ಹಂತದಿಂದಲೇ ಇರುತ್ತದೆ. ಅತ್ತ ಪರ್ಯಾಯ ಎನ್ನಲಾಗದ, ಪ್ರಯೋಗಶೀಲ ಅಲ್ಲವೇ ಅಲ್ಲ ಎಂದು ಜರೆಯಲಾಗದ, ಜನಪ್ರಿಯ ಧಾಟಿಯಲ್ಲೇ ಮಾರ್ಪಾಡುಗಳನ್ನು ಮಾಡಿ ಗೆಲ್ಲುವ ಇಂಥ ಚಿತ್ರಗಳನ್ನು 'ಮಾಸ್ ಕಲ್ಟ್' ಎಂದು ಕರೆಯಬಹುದೇನೋ? 'ಅರ್ಜುನ್ ರೆಡ್ಡಿ' ತೆಲುಗು ಚಿತ್ರ ನೋಡಿದ ಮೇಲೆ 'ಕಲ್ಟ್' ಕುರಿತ ವ್ಯಾಖ್ಯಾನವನ್ನು ಮರುವಿಮರ್ಶೆಗೆ ಒಳಪಡಿಸಬೇಕು ಎನ್ನಿಸಿತು.

ನಾವು ಹಲವು ಬಗೆಯ 'ದೇವದಾಸ್'ಗಳನ್ನು ನೋಡಿದ್ದೇವೆ. ಪ್ರೇಮ ಹಾಗೂ ಮದ್ಯದ ಅಮಲಿನ ಪರಾಕಾಷ್ಠೆಯ ಮಾದರಿ ಅದು. ಸಿನಿಮಾ ಆಗಿ ಅಷ್ಟೇ ಅಲ್ಲದೆ ಸಾಂಸ್ಕೃತಿಕವಾಗಿಯೂ 'ದೇವದಾಸ್' ಒಂದು ಭಗ್ನಪ್ರೇಮದ ರೂಪಕವೇ ಹೌದು. ಈ ರೂಪಕವನ್ನು ಎತ್ತಿಕೊಂಡು, ಅದರ ಅಸ್ತಿತ್ವವನ್ನೂ ಕೆಣಕುತ್ತಾ ನಿರ್ದೇಶಕ ಸಂದೀಪ್ ರೆಡ್ಡಿ ವಂಗ 'ಅರ್ಜುನ್ ರೆಡ್ಡಿ' ತೆಲುಗು ಸಿನಿಮಾ ಕಟ್ಟಿದ್ದಾರೆ.

ಇದರ ಕಥೆ ಮಾಮೂಲೇ. ಕಾಲೇಜು ಹುಡುಗನ 'ಲವ್ ಅಟ್ ಫಸ್ಟ್ ಸೈಟ್'. ಹುಡುಗಿಯ ಮನೆಯವರ ಪ್ರತಿರೋಧ. ಅವಳಿಗೆ ಬೇರೆ ಹುಡುಗನ ಜೊತೆ ಮದುವೆ. ಭಗ್ನಪ್ರೇಮಿ ಹುಡುಗ ದಾಡಿ ಬಿಟ್ಟು, ಮದ್ಯ–ಮಾದಕ ದ್ರವ್ಯಗಳ ವ್ಯಸನಕ್ಕೆ ಸಿಲುಕುವುದು. ಇಷ್ಟು ಕೇಳಿದರೆ ಇದರಲ್ಲಿ ಹೊಸತೇನಿದೆ ಎನಿಸಿಬಿಡುತ್ತದೆ. ಸಂದೀಪ್ ರೆಡ್ಡಿ ಇಷ್ಟೇ ಕಥನದ ಆತ್ಮ ಎತ್ತಿಕೊಂಡು, ಹೊಸತು ಏನಿದೆ ಎನ್ನುವುದರ ಕುರಿತು ಅಷ್ಟಾಗಿ ತಲೆಕೆಡಿಸಿಕೊಳ್ಳದೆ ಬಗೆದು ನೋಡಿದರೆ ಭಾವಲೋಕದ ಇನ್ನಷ್ಟು ತುಮುಲಗಳು ಸಿಗುತ್ತವೆ ಎಂದು ತೋರಿಸಿಕೊಟ್ಟಿದ್ದಾರೆ.

ಚಿತ್ರಕಥೆ ಹೇಗಿದೆ ಎಂದರೆ ಅದನ್ನು ಅವರು ಚಿತ್ರೀಕರಣ ನಡೆಸಿದ ಜಾಗಗಳಲ್ಲೇ ಕುಳಿತು ಬರೆದಹಾಗೆ. ಪಾತ್ರಪೋಷಣೆಯ ಸ್ಥಿರತೆ ಎಷ್ಟರ ಮಟ್ಟಿಗೆ ಇದೆಯೆಂದರೆ, ಅವುಗಳ ನುಡಿಗಟ್ಟು, ವ್ಯಕ್ತಿತ್ವ ಎಲ್ಲೂ ಹದತಪ್ಪದ ಹಾಗೆ. ಸಣ್ಣ ಪಾತ್ರಕ್ಕೂ ಅದರದ್ದೇ ಆದ ಮಹತ್ವವಿದೆ. ನೋಡುಗರಾಗಿ ನಮ್ಮಲ್ಲಿ ಏಳುವ ಪ್ರಶ್ನೆಗಳು ನಿರ್ದೇಶಕರಿಗೂ ಎದ್ದಿವೆ. ಅವನ್ನು ಬೇರೆ ಬೇರೆ ಪಾತ್ರಗಳ ಮೂಲಕ ಅವರು ಕೇಳಿಸಿದ್ದಾರೆ. ವಿಮರ್ಶೆ, ಸಂವಾದ, ಮೂರು ತಲೆಮಾರುಗಳ ಭಿನ್ನ ದೃಷ್ಟಿಕೋನಗಳು ಎಲ್ಲವೂ ಚಿತ್ರದ ಔಚಿತ್ಯಕ್ಕೆ ತಕ್ಕಂತೆ ಬೆಸೆದುಕೊಂಡಿವೆ. ಎಲ್ಲಕ್ಕಿಂತ ಮಿಗಿಲಾಗಿ ನಿರ್ದೇಶಕರು 'ಜಾಹೀರಾತು ಪ್ರಣೀತ ಶಾಟ್ ಸೃಷ್ಟಿ'ಯ ಬೀಸಿನಿಂದ